# ಪತ್ರಿಕೋದ್ಯಮದ ಒಂಟಿಸಲಗ



ಭಾರತದ ಸಮಕಾಲೀನ ಹಿರಿಯ ಪತ್ರಕರ್ತರಲ್ಲಿ ಎದ್ದುಕಾಣುವ ಬಹುದೊಡ್ಡ ಹೆಸರು ಪಾಲಗುಮ್ಮಿ ಸಾಯಿನಾಥ್ ಅವರದು. ತಮ್ಮ ಚಿಂತನೆ ಹಾಗೂ ಬರಹಗಳಲ್ಲಿ ಗ್ರಾಮೀಣ ಬದುಕನ್ನೇ ಉಸಿರಾಡುವ ಈ ಪತ್ರಕರ್ತನ ಪಾಲಿಗೆ ಕೃಷಿಕರ ಕುರಿತು ಬರೆಯುವುದೆಂದರೆ ಒಂದು ತಪಸ್ಸೇ ಸರಿ. ಕೃಷಿಸಂತ ಎನಿಸಿದ ‘ಒಂದು ಹುಲ್ಲಿನ ಕ್ರಾಂತಿ’ಯ ಹರಿಕಾರ ಫುಕುವೊಕಾ ಹೆಸರಿನಲ್ಲಿ ಜಪಾನಿನ ಸಂಸ್ಥೆ ನೀಡುವ ಗ್ರ್ಯಾಂಡ್ ಪುರಸ್ಕಾರವು (ಏಷ್ಯಾದ ಸಂಸ್ಕೃತಿಯನ್ನು ಸಂರಕ್ಷಿಸಲು ಶ್ರಮಿಸಿದವರಿಗೆ ಈ ಪ್ರಶಸ್ತಿ ಮೀಸಲು) ಈ ಬಾರಿ ಇಂತಹ ದೊಡ್ಡ ಸಾಧಕನನ್ನೇ ಹುಡುಕಿಕೊಂಡು ಬಂದಿದೆ.

ಗ್ರಾಮ ಭಾರತದ ಕುರಿತು ಸಾಯಿನಾಥ್ ಅವರಿಗೆ ಎಂತಹ ಬದ್ಧತೆಯೆಂದರೆ ತಮ್ಮ ವೃತ್ತಿ ಬದುಕಿನ ಉದ್ದಕ್ಕೂ ಅದೇ ವಿಷಯವಾಗಿ ಧೇನಿಸಿದವರು. ವೃತ್ತಿ ಬದುಕಿಗೆ ವಿದಾಯ ಹೇಳಿದ ಮೇಲೆ ಗ್ರಾಮೀಣ ಭಾಗಗಳ ಎಲ್ಲ ಧ್ವನಿಗಳಿಗೆ ಅವಕಾಶ ಕಲ್ಪಿಸಲೆಂದೇ ‘ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯಾ’ (ಪಾರಿ) ಎಂಬ ವೆಬ್‌ಸೈಟ್ ಆರಂಭಿಸಿದವರು. ಆ ಮೂಲಕ ಗ್ರಾಮಭಾರತದ ಪತ್ರಿಕೋದ್ಯಮಕ್ಕೆ ಡಿಜಿಟಲ್ ಸ್ಪರ್ಶವನ್ನೂ ನೀಡಿದವರು.

ಕೃಷಿಕ ಸಮುದಾಯ ಎದುರಿಸುತ್ತಿರುವ ಬಿಕ್ಕಟ್ಟುಗಳು, ಹಳ್ಳಿಗರ ಜೀವನಶೈಲಿ ಹಾಗೂ ಅವರ ಕಲೆ, ಸಂಸ್ಕೃತಿಗಳನ್ನು ದಾಖಲಿಸುವ (ಪಾರಿಯಲ್ಲಿ ಈಗ ದತ್ತಾಂಶಗಳ ದೊಡ್ಡ ಖಜಾನೆಯೇ ಇದೆ) ಕೆಲಸವನ್ನು ಮಾಡಿದವರು ಈ ಪತ್ರಕರ್ತ. ರಾಜಕಾರಣಿಗಳು, ಅಧಿಕಾರಸ್ಥರು ಗ್ರಾಮಾಭಿವೃದ್ಧಿಯ ಸಂಕಥನಗಳನ್ನು ಕಟ್ಟಿ ಹರಿಬಿಡುವಾಗ, ಅಲ್ಲಿನ ನೈಜ ಚಿತ್ರಣವನ್ನು ಕಣ್ಣಿಗೆ ರಾಚುವಂತೆ ಹಿಡಿದು ತೋರಿದವರು ಅವರು. ಕೃಷಿಕರ ಆತ್ಮಹತ್ಯೆಗಳ ಕುರಿತು ಅಧ್ಯಯನಪೂರ್ಣ ಲೇಖನಗಳನ್ನೂ ಬರೆದವರು. ಗ್ರಾಮೀಣ ಅರ್ಥವ್ಯವಸ್ಥೆಯ ಕುರಿತು ಅಧಿಕಾರಯುತವಾಗಿ ಮಾತನಾಡಬಲ್ಲವರು.

ಭಾರತದ ಈ ಪತ್ರಕರ್ತನಿಗೆ ಪುರಸ್ಕಾರ ಸಂದಿದ್ದು ಹೇಗೆ ಎಂದು ಬರೆಯುತ್ತಾ ಫುಕುವೊಕಾ ಇಂಟರ್‌ನ್ಯಾಷನಲ್ ಸಂಸ್ಥೆ ಹೀಗೆ ಹೇಳಿದೆ: ‘ಏಷ್ಯಾ ಖಂಡವೀಗ ಕ್ಷಿಪ್ರ ಬದಲಾವಣೆಗಳಿಗೆ ಸಾಕ್ಷಿ ಆಗುತ್ತಿದೆ. ಹೊಸಜ್ಞಾನದ ಹುಡುಕಾಟದಲ್ಲಿರುವ ಸಾಯಿನಾಥ್, ಆ ಜ್ಞಾನದ ಬಲದಿಂದ ನಾಗರಿಕರ ಬದುಕು ಸಹನೀಯಗೊಳ್ಳಲು ಅಗತ್ಯವಾದ ಸಹಕಾರ ನೀಡುವ ಕೆಲಸವನ್ನು ಮಾಡುತ್ತಿದ್ದಾರೆ. ಹೀಗಾಗಿ ಅವರಿಗೆ ಈ ಪ್ರಶಸ್ತಿ’. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಗ್ರಾಮೀಣ ಭಾಗದ ಜನರ ಕಣ್ಣೀರು ಒರೆಸಲು ಅವರು ನಡೆಸಿದ ಯತ್ನವೂ ಫುಕುವೊಕಾ ಸಂಸ್ಥೆಯ ಗಮನವನ್ನು ಸೆಳೆದಿದೆ.

‘ಗ್ರಾಮಾಂತರ ಭಾಗದಲ್ಲಿ ಅಪಾಯವನ್ನು ಲೆಕ್ಕಿಸದೆ ಅಲ್ಲಿನ ಜನಜೀವನವನ್ನು ವರದಿ ಮಾಡುತ್ತಿರುವ ಗ್ರಾಮೀಣ ಪತ್ರಕರ್ತರಿಗೆ ಈ ಪ್ರಶಸ್ತಿಯನ್ನು ಅರ್ಪಿಸುತ್ತಿದ್ದೇನೆ’ ಎನ್ನುವುದು ಸಾಯಿನಾಥ್ ಅವರ ವಿನೀತವಾದ ಮಾತು. ಅದೇ ಕ್ಷಣದಲ್ಲಿ ಅವರು ಹೇಳುವ ಇನ್ನೊಂದು ಮಾತು ತಟ್ಟನೆ ಎಲ್ಲರನ್ನೂ ಸೆಳೆಯುತ್ತದೆ. ಅವರು ಹೇಳುತ್ತಾರೆ: ‘ಈ ಪ್ರಶಸ್ತಿಯ ಘೋಷಣೆಯು ಪತ್ರಕರ್ತರು, ಅಧಿಕಾರಸ್ಥರ ಸ್ಟೆನೊಗ್ರಾಫರ್‌ಗಳಾಗಿ ಉಳಿಯಬಾರದು ಎಂಬ ಉದ್ದೇಶವುಳ್ಳ ಪ್ರಗತಿಪರ ಅಂತರರಾಷ್ಟ್ರೀಯ ಸಂಸ್ಥೆಗಳು ನಮ್ಮ ನಡುವೆ ಇರುವುದರ ದ್ಯೋತಕ’.

ಚೆನ್ನೈನಲ್ಲಿ ಹುಟ್ಟಿ, ಬೆಳೆದ ಸಾಯಿನಾಥ್, ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ. ಭಾರತದ ರಾಷ್ಟ್ರಪತಿಯಾಗಿದ್ದ ವಿ.ವಿ. ಗಿರಿ ಅವರ ಮೊಮ್ಮಗ. ‘ದಿ ಹಿಂದೂ’ ಪತ್ರಿಕೆಯಲ್ಲಿ ಗ್ರಾಮೀಣ ಸುದ್ದಿಗಳ ಸಂಪಾದಕರಾಗಿ ಕೆಲಸ ಮಾಡಿದವರು. ‘ಬ್ಲಿಟ್ಜ್’ ಪತ್ರಿಕೆಗೂ ಸಹ ಸಂಪಾದಕರಾಗಿದ್ದವರು. ಗ್ರಾಮೀಣ ಭಾಗದಲ್ಲಿ ಸರ್ಕಾರ ಹಾಕಿಕೊಂಡ ಯೋಜನೆಗಳ ಕುರಿತು ತನಿಖಾ ವರದಿಗಳನ್ನು ಮಾಡಿದವರು. ಯುರೋಪಿಯನ್ ಕಮಿಷನ್ನಿನ ‘ಲಾರೆಂಜೊ ನಟಾಲಿ’, ಅಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ‘ಹ್ಯೂಮನ್ ರೈಟ್ಸ್ ಜರ್ನಲಿಸಂ’ ಅಲ್ಲದೆ ಮ್ಯಾಗ್ಸೆಸೆ, ಗೊಯಂಕಾ ಪ್ರಶಸ್ತಿಗಳೂ ಈಗಾಗಲೇ ಅವರ ತುರಾಯಿಯಲ್ಲಿವೆ.

ಗ್ರಾಮ ಭಾರತದ ದರ್ಶನ ಮಾಡಿಸಲು ಅವರು ಬರೆದ ಸರಣಿ ಲೇಖನಗಳ ಗುಚ್ಛವೇ ‘ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್’ (ಬರ ಎಂದರೆ ಎಲ್ಲರಿಗೂ ಇಷ್ಟ). ದೇಶದ ಕ್ಷಾಮದ ಸನ್ನಿವೇಶದ ಕುರಿತು ಅವರು ನೀಡಿದ ಒಳನೋಟಗಳು ಎಲ್ಲರ ಕಣ್ಣುಗಳನ್ನೂ ತೆರೆಸುವಂತಿದ್ದವು. ಹಳ್ಳಿಗಳ ಸಂಕಷ್ಟವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟ ಈ ಕೃತಿ ಭ್ರಷ್ಟ ವ್ಯವಸ್ಥೆಯ ಕತ್ತಲ ಜಗತ್ತನ್ನು ಅನಾವರಣ ಮಾಡಿತ್ತು. ಈ ಕಾರಣದಿಂದ ಸ್ವತಂತ್ರ ಭಾರತದ ಇದುವರೆಗಿನ ಮಹತ್ವದ ಕೃತಿಗಳಲ್ಲಿ ಇದೂ ಒಂದೆನಿಸಿದೆ.

ದೆಹಲಿಯಲ್ಲಿ ಕೃಷಿಕ ಸಮುದಾಯ ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿರುವ ಈ ಪತ್ರಕರ್ತ, ‘ಪತ್ರಿಕೋದ್ಯಮ ಎನ್ನುವುದು ಜನರಿಗಾಗಿಯೇ ಹೊರತು, ಶೇರ್‌ಹೋಲ್ಡರ್‌ಗಳಿಗಾಗಿ ಅಲ್ಲ’ ಎಂಬ ನಿಲುವನ್ನು ಹೊಂದಿದವರು. ‘ಪತ್ರಿಕೋದ್ಯಮವು ಎಂದಿಗೂ ಸರ್ಕಾರದ ಅಂಕೆಗೆ ಒಳಗಾಗಬಾರದು. ಪತ್ರಕರ್ತರು ತಾವು ವರದಿ ಮಾಡುವ ವಿಭಾಗದಲ್ಲಿ ಸರ್ಕಾರದಿಂದ ಯಾವುದೇ ಪ್ರಶಸ್ತಿ ಸ್ವೀಕರಿಸಲು ಒಪ್ಪಬಾರದು’ ಎನ್ನುವುದು ಅವರ ಖಡಾಖಂಡಿತ ಅಭಿಪ್ರಾಯ.

ಪ್ರಖ್ಯಾತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್, ‘ಕ್ಷಾಮ ಮತ್ತು ಹಸಿವಿನ ಕುರಿತು ಮಹಾನ್ ತಿಳಿವಳಿಕೆಯನ್ನು ಹೊಂದಿದ ಜಗತ್ತಿನ ಸರ್ವಶ್ರೇಷ್ಠ ತಜ್ಞರಲ್ಲಿ ಸಾಯಿನಾಥ್ ಕೂಡ ಒಬ್ಬರು’ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೆನಡಾದ ಚಿತ್ರ ನಿರ್ದೇಶಕ ಜೋ ಮೌಲಿನ್ಸ್, ಈ ಪತ್ರಕರ್ತನ ಜೀವನ ಕತೆಯನ್ನು ಆಧರಿಸಿ ‘ಎ ಟ್ರೈಬ್ ಆಫ್ ಹಿಸ್ ಓನ್’ ಕಿರುಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಭಾರತೀಯ ಪತ್ರಕರ್ತರ ಪಾಲಿಗೆ ಈ ಸಾಧಕ ಹೇಗೆ ಮಾದರಿಯಾಗಿ ನಿಲ್ಲುತ್ತಾರೆ ಎನ್ನುವುದನ್ನು ಆ ಕಿರುಚಿತ್ರ ಸೊಗಸಾಗಿ ಕಟ್ಟಿಕೊಟ್ಟಿದೆ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65